**<u>ದಿನಾಂಕಃ 02.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಜೆ ಪಿ ವಕೀಲರಿಂದಃ-</u>

ನಾನು ಹುಟ್ಟಿ ಬೆಳೆದಿದ್ದು ಇಂದಿರಾ ಕಾಟೇಜ್ ನಲ್ಲಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಹುಟ್ಟಿದ್ದು ಬೇರೇ ಸ್ಥಳ, ಪ್ರಸ್ತುತ ನಾನು ಇಂದಿರಾ ಕಾಟೇಜ್ ನಲ್ಲಿ ವಾಸ ಇದ್ದೇನೆ ಎನ್ನುತ್ತಾರೆ. ನನಗೆ ಸುಮಾರು 7-8 ವರ್ಷ ವಯಸ್ಸಿದ್ದಾಗ ನಾನು ಇಂದಿರಾ ಕಾಟೇಜ್ ಗೆ ಬಂದು ವಾಸ ಇದ್ದೇನೆ. ನನ್ನ ತಂದೆ ತಾಯಿ ಸಹೋದರರೆಲ್ಲಾ ಇಂದಿರಾ ಕಾಟೇಜ್ ನಲ್ಲಿ ವಾಸ ಇರುವುದು ಎಂದರೆ ಸರಿ. ನನ್ನ ತಂದೆ ತಾಯಿ ಮದುವೆಯಾದ ಸಮಯದಲ್ಲಿ ಸಲಾಂ ಉಲ್ಲಾ ಬೀದಿಯಲ್ಲಿ ಮನೆ ಮಾಡಿಕೊಂಡು ವಾಸ ಇದ್ದರು. 1970 ನೇ ಇಸವಿಯಲ್ಲಿ ದಾವಾ ಆಸ್ತಿಯಲ್ಲಿ ಏನಿತ್ತು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಒಂದು ಶೆಡ್ಡು ಇದ್ದ ಬಗ್ಗೆ ನಾನು ತಿಳಿದುಕೊಂಡಿದ್ದೇನೆ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ಒಂದು ಅಂಗಡಿ ಮತ್ತು ವಾಸದ ಮನೆ ಇದೆ ಎಂದರೆ ಸರಿ. ಸುಮಾರು 10 – 12 ವರ್ಷಗಳ ಹಿಂದೆ ಶೆಡ್ಡು ಇದ್ದ ದಾವಾ ಆಸ್ತಿಯಲ್ಲಿ ವಾಸದ ಮನೆ ಮತ್ತು ಅಂಗಡಿ ಮಳಿಗೆ ನಿರ್ಮಾಣ ಆಗಿವೆ. ಅಗಂಡಿ ಇರುವ ಭಾಗಕ್ಕೆ ವಾಸದ ಮನೆ ಸ್ವಲ್ಪ ಮುರಿದು ಬಿದ್ದಿದೆ ಎಂದರೆ ಸರಿ. 1994 ನೇ ಇಸವಿಗೆ ತಮ್ಮ ವಯಸ್ಸು ಎಷ್ಟು ಇತ್ತು ಎಂದರೆ ಸಾಕ್ಷಿಯು ನನಗೆ 14 – 15 ವರ್ಷ ವಯಸ್ಸು ಎನ್ನುತ್ತಾರೆ.

7 ನೇ ಪ್ರತಿವಾದಿ ವೃತ್ತಿಯಲ್ಲಿ ಮರಗೆಲಸ ಕಾಯಕ ಮಾಡುತ್ತಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಇರುವ ಅಂಗಡಿ ಮಳಿಗೆಯಲ್ಲಿ 1994 ನೇ ಇಸವಿಯಿಂದ 7 ನೇ ಪ್ರತಿವಾದಿಯು ಕಾರ್ಪೆಂಟರ್ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಇರುವ ವಾಸದ ಮನೆಯಲ್ಲಿ 1 ನೇ ಪ್ರತಿವಾದಿ ಫಾತಿಮಾ ತಮ್ಮ ಕುಟುಂಬದ ಸಮೇತ ವಾಸ ಇದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಪ್ಯಾರಾ 3 ರಲ್ಲಿ ಫಾತಿಮಾ ಬೀ ಮತ್ತು ಅಜೀಜ್ ರವರು ನಮಗೆ ಮನೆ ಕೊಡಿ ಎಂದು ಕೇಳುತ್ತಿದ್ದರು ಎಂದು ತಾವು ಹೇಳಿದ್ದು ಎಷ್ಟು ವರ್ಷದ ಹಿಂದೆ ಕೇಳಿದ್ದರು ಎಂದರೆ ಸಾಕ್ಷಿಯು 2018 ನೇ ಇಸವಿಯಲ್ಲಿ ಎನ್ನುತ್ತಾರೆ.

2010 ನೇ ಇಸವಿಯಲ್ಲಿ ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದು ಏನಾದರೂ ಪತ್ರ ಬರೆಸಿಕೊಂಡಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. 2018 ರಲ್ಲಿ 1 ನೇ ಪ್ರತಿವಾದಿಯನ್ನು ದಾವಾ ಆಸ್ತಿಯಿಂದ ಖಾಲಿ ಮಾಡಿಸಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಸಾಕ್ಷಿಯು ನಾನು ಮತ್ತು ನನ್ನ ತಾಯಿ ಖಾಲಿ ಮಾಡವಂತೆ ಹೇಳಲು ಹೋಗಿದ್ದೆವು ಎನ್ನುತ್ತಾರೆ. ನಿಪಿ 3 ರಂತೆ 1992 ನೇ ಇಸವಿಯಲ್ಲಿ ದಾವಾ ಆಸ್ತಿಯ ಖಾತೆ 1

ನೇ ಪ್ರತಿವಾದಿ ಹೆಸರಿಗೆ ಬದಲಾಗಿದೆ ಎಂದರೆ ಸರಿಯಲ್ಲ. ನಿಪಿ 5 ರಂತೆ 1976 -77 ನೇ ಸಾಲಿನಲ್ಲಿ ನನ್ನ ತಂದೆ ಹೆಸರಿನಿಂದ ಅಜೀಜ್ ಹೆಸರಿಗೆ ಖಾತೆ ಬದಲಾಗಿದೆ ಎಂದರೆ ಸರಿಯಲ್ಲ. 1974 ನೇ ಇಸವಿಯಲ್ಲಿ ನನ್ನ ತಾತಾ ಬುಕ್ತು ಸಾಬ್ ಮತ್ತು ಬುವಾಸಾ ರವರು ಅಜೀಜ್ ರವರ ಹೆಸರಿಗೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಜೀಜ್ ರವರ ಹೆಸರಿಗೆ 1976-77 ನೇ ಸಾಲಿನಲ್ಲಿ ಅಜೀಜ್ ರವರ ಹೆಸರಿಗೆ ದಾವಾ ಆಸ್ತಿಯ ಖಾತೆಯು ಬದಲಾಗಿ ಅಲ್ಲಿಂದ ಇಲ್ಲಿಯವರೇಗೂ ಅವರೇ ಸ್ವಾಧೀನದಲ್ಲಿ ಇದ್ದರೆ ಎಂದರೆ ಸರಿಯಲ್ಲ.

ದಿಃ 21.11.1992 ರಂದು ಆದ ವಿಭಾಗ ಪತ್ರದ ಪ್ರಕಾರ ದಾವಾ ಆಸ್ತಿಯನ್ನು ಅಜೀಜ್ ರವರು ಫಾತಿಮಾ ರವರಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 1974 ರಲ್ಲಿ ಆದ ಕ್ರಯಪತ್ರದಂತೆ ಅಜೀಜ್ ಮತ್ತು ಫಾತಿಮಾ ರವರು ವಿಭಾಗ ಮಾಡಿಕೊಂಡು ವಿಭಾಗದಲ್ಲಿ ದಾವಾ ಆಸ್ತಿಯು 1 ನೇ ಪ್ರತಿವಾದಿಯ ಭಾಗಕ್ಕೆ ಬಂದಿದ್ದು ಅವರೇ ದಾವಾ ಆಸ್ತಿಗಳಿಗೆ ಕಂದಾಯ ದಾಖಲಾತಿ ಮಾಡಿಸಿಕೊಂಡು ಅವರೇ ಸ್ವಾ ಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯು ಮನೆಯನ್ನು ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ. 1992 ನೇ ಇಸವಿಯಲ್ಲಿ ದಾವಾ ಆಸ್ತಿಯಲ್ಲಿ ಮನೆ ಕಟ್ಟಿದ್ದು ಸದರಿ ಮನೆಯು ಒಂದು ಭಾಗದಲ್ಲಿ ಮುರಿದುಕೊಂಡು ಶಿಥಿಲಾವಸೆ ಯಲ್ಲಿದೆ ಎಂದರೆ ಸಾಕ್ಷಿ ಮಣ್ಣಿನ ಗೋಡೆ ಇರುವುದರಿಂದ ಒಂದು ಕಡೆ ಬಿದ್ದು ಹೋಗಿದೆ ಎನ್ನುತ್ತಾರೆ. ನಿಪಿ 10 ಮರಣ ಪ್ರಮಾಣ ಪತ್ರವನ್ನು ಈ ಕೇಸಿಗಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೌಲ್ಯ ಇವತ್ತಿಗೆ ಅತೀ ಹೆಚ್ಚು ಇರುವುದರಿಂದ ದಾವಾ ಅಸ್ತಿಯನ್ನು ಹೇಗಾದರೂ ಮಾಡಿ ಲಪಟಾಯಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 16.12.1974 ರಲ್ಲಿ ಆದಂತಹ ಕ್ರಯಪತ್ರವನ್ನು ಅಜೀಜ್ ರವರು ದಾವಾ ಆಸ್ತಿಯನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಸುಳ್ಳು ಕ್ರಯಪತ್ತ ಮಾಡಿಕೊಂಡಿರುತ್ತಾರೆ ಎಂದು ತಾವು ಹೇಳಿದ್ದು ಸದರಿ ಆಸ್ತಿಯು ಕ್ರಯಪತ್ರ ಆಗಿರುವುದು ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿಯು 2018 ನೇ ಇಸವಿಯಲ್ಲಿ ನನಗೆ ಗೊತ್ತಾಯಿತು ಎನ್ನುತ್ತಾರೆ. ದಾವೆ ಹೂಡುವ ಪೂರ್ವದಲ್ಲಿ ತಾವೇನಾದರೂ 1974 ರಲ್ಲಿ ಮಾಡಿಕೊಂಡ ಕ್ರಯಪತ್ರ ಮೋಸದಿಂದ ಆಗಿರುತ್ತದೆ ಎಂದು ಪೊಲೀಸ್ ಪಿರ್ಯಾದು ಕೊಟಿಟದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವೆ ಹೂಡಲು ನನಗೆ ಯಾವುದೇ ಸಕಾರಣ ಉಂಟಾಗಿಲ್ಲ, ಆದರೂ ಸುಳ್ಳು ಕಾರಣ ಹೇಳಿ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1974 ನೇ ಇಸವಿಯಲ್ಲೇ 1 ನೇ ಪ್ರತಿವಾದಿಯ ಅಣ್ಣನಿಗೆ ದಾವಾ ಆಸ್ತಿಯ ಕ್ರಯಪತ್ರ ಆಗಿದ್ದು ನನಗೆ ಯಾವುದೇ ಹಕು್ಕ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇಹಕ್ಕು ಮತ್ತು ಹಿತಾಸಕ್ತಿ ಇಲ್ಲದೇ ಇದ್ದರೂ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ